ಬೀಳುವಂತೆ ಮಾಡಿದ್ದ. ಊರಿನ ಅರ್ಧದಷ್ಟು ಜನರಲ್ಲಿ ಕ್ರಮೇಣ ಅಕ್ಕಯ್ಯಮ್ಮನ ಮೇಲಿದ್ದ ಒಲವನ್ನು ಮುರಿದು ಹಾಕುವಲ್ಲಿ ಯಶಸ್ವಿಯಾಗಿದ್ದ. ಅಕ್ಕಯ್ಯಮ್ಮನ ಆಮ್ಲೇಟಿನ ರುಚಿಯನ್ನು ಕಂಡಿದ್ದ ಸುಮಾರು ಜನ, ಅಕ್ಕಯ್ಯಮ್ಮ ಗೆದ್ದ ಅನಂತರ ಆಮ್ಲೇಟ್ ಅಂಗಡಿಯನ್ನು ಮುಚ್ಚಿದರೆ ಏನು ಗತಿ ಎಂಬ ಚಿಂತೆಗೂ ಬಿದ್ದು ಮನದ ಮೂಲೆಯಲ್ಲೆಲ್ಲೋ ಒಂದು ಕಡೆ ಅಕ್ಕಯ್ಯಮ್ಮ ಸೋತರೆ ಒಳ್ಳೆಯದಲ್ಲವೆ ಎಂಬ ದೂ(ದು)ರಾಲೋಚನೆಯೂ ಚಿಗುರೊಡೆದಿತ್ತು. ಇವ್ಯಾವ ವಿದ್ಯಮಾನಗಳೂ ಬಂದವರಿಗೆಲ್ಲಾ ಬಿಜಿಯಿಂದ ಆಮ್ಲೇಟ್ ಹಾಕಿಕೊಡುತ್ತಿದ್ದ ಅಕ್ಕಯ್ಯಮ್ಮನ ಸುತ್ತಮುತ್ತಲೂ ಸುಳಿಯಲಿಲ್ಲ.

ಎಲೆಕ್ಷನ್ ದಿನ ಬಂದೇ ಬಿಟ್ಟಿತ್ತು. ಹಿಂದಿನ ದಿನ ಅಕ್ಕಯ್ಯಮ್ಮನ ಆಮ್ಲೇಟ್ ಅಂಗಡಿಯಿಂದಲೇ ಸ್ಕೂಲಿನಲ್ಲಿ ಉಳಿದುಕೊಂಡಿದ್ದ ಎಲೆಕ್ಷನ್ ಸಿಬ್ಬಂದಿ ಮತ್ತು ಪೊಲೀಸರಿಗೆ ಬೆಣ್ಣೆ ಹಾಕಿ ಮಾಡಿದ್ದ ಬಿಸಿಬಿಸಿ ಆಮ್ಲೇಟುಗಳು ಸಪ್ಲೈ ಆಗಿದ್ದವು. ಬೆಳಗ್ಗೆ ಏಳು ಗಂಟೆಗೆಲ್ಲ ಮತದಾನ ಶುರುವಾಗಿತ್ತು. ಅಕ್ಕಯ್ಯಮ್ಮ ಯಾವ ಚಿಂತೆಯೂ ಇಲ್ಲದಂತೆ ಸ್ನಾನ ಮಾಡಿ ಎಂಟೂವರೆ ಗಂಟೆಗೆ ಹೋಗಿ ಮೊಟ್ಟೆಯ ಗುರುತಿಗೆ ಓಟು ಹಾಕಿದ್ದಳು. ಎದುರು ಸಿಕ್ಕಿದವರೆಲ್ಲಾ, ''ಅಕ್ಕಯ್ಯಮ್ಮ ನಿನ್ನ ಋಣ ತೀರ್ಸಿದಿನಮ್ಮ...'' ''ಅಕ್ಕಯ್ಯಮ್ಮ ಮೊಟ್ಟೆ ಪಕ್ಕಕ್ಕೆ ಗುದ್ದಿದ್ದೀನಮ್ಮ...'' ''ಅಕ್ಕಯ್ಯಮ್ಮ ನನ್ನ ಓಟು ನಿಂಗೇ ಕೊಟ್ಟಿದ್ದೀನಮ್ಮ. ನಾನು ಓಟು ಹಾಕಿಸಿಕೊಂಡೋರು ಯಾವೊತ್ತೂ ಸೋತಿದ್ದೇ ಇಲ್ಲ...'' ಮುಂತಾಗಿ ಮಾತನಾಡಿ ಮುಂದೆ ಸಾಗುತ್ತಿದ್ದರು. ಸಂಜೆ ಏಳು ಗಂಟೆಗೆಲ್ಲ ಎಲೆಕ್ಷನ್ ಬಸ್ಸು ಸಿಬ್ಬಂದಿಯನ್ನು, ಓಟಿನ ಬೂತನ್ನು ತುಂಬಿಕೊಂಡು ತಾಲ್ಲೂಕು ದಾರಿಯನ್ನು ಹಿಡಿದಿತ್ತು. ಬೆಳಗ್ಗೆಯಿಂದ ಗಲಗಲ ಎನ್ನುತ್ತಿದ್ದ ಊರು ಕತ್ತಲನ್ನುಂಡು, ಮೌನ ಹೊದ್ದು ಮಲಗಿತ್ತು. ಮತ ಎಣಿಕೆ ಇನ್ನು ಮೂರು ದಿನಕ್ಕೆ ನಿಗದಿಯಾದ್ದರಿಂದ, ಆವೊತ್ತಿನವರೆಗೂ ಆಮ್ಲೇಟ್ ಅಂಗಡಿಗೆ ರಜ ಮಾಡಲು ತೀರ್ಮಾನಿಸಿದ ಅಕ್ಕಯ್ಯಮ್ಮ ನೆಮ್ಮದಿಯಾಗಿ ನಿದ್ದೆ ಹೋಗಿದ್ದಳು. ಮತ ಎಣಿಕೆಯ ದಿನವೂ ತಡಮಾಡದೆ ಓಡಿಬಂದಿತ್ತು. ಅಕ್ಕಯ್ಯಮ್ಮ ಬೇಡ ಬೇಡವೆಂದರೂ ಈರಪ್ಪನೋರ ವೆಂಕಟೇಶ ಮತ ಎಣಿಕೆ ನಡೆಯುತ್ತಿದ್ದ ತಾಲ್ಲೂಕಿನ ಜೂನಿಯರ್ ಕಾಲೇಜು ಹತ್ತಿರ ಕರೆದುಕೊಂಡು ಹೋಗಿದ್ದ. ಸುಮಾರು ಹನ್ನೆರಡೂವರೆ ಹೊತ್ತಿಗೆ ರಿಸಲ್ಟ್ ಹೊರಬಿದ್ದಿತ್ತು. ಅಕ್ಕಯ್ಯಮ್ಮ ತನ್ನ ಸಮೀಪದ ಸ್ಪರ್ಧಿ ಪೊಲೀಸ್ ನಂಜುಂಡನ ಹೆಂಡತಿ ಜಯಮ್ಮನ ವಿರುದ್ಧ ಎಪ್ಪತ್ತೆರಡು ಓಟುಗಳ ಅಂತರದಿಂದ ಸೋತಿದ್ದಳು! ಪೊಲೀಸ್ ನಂಜುಂಡ ಹೆಂಡತಿ ಜಯಮ್ಮನ ಕೊರಳಿಗೆ ಮಲ್ಲಿಗೆ ಹಾರ ಹಾಕಿ ಕುಣಿಯುತ್ತಿದ್ದ. ಊರಿಗೆ ಹಿಂತಿರುಗಿದ ಅಕ್ಕಯ್ಯಮ್ಮ ಆವೊತ್ತು ಸಂಜೆಯೇ ತನ್ನ ಅಂಗಡಿಯನ್ನು ತೆರೆದು, ಸ್ಟೌ ಹಚ್ಚಿ ಆಮ್ಲೇಟುಗಳನ್ನು ಹಾಕತೊಡಗಿದಳು. ಆಮ್ಲೇಟ್ ವಾಸನೆ ಹಿಡಿದು ಗಿರಾಕಿಗಳು ಮೆಲ್ಲ ಮೆಲ್ಲನೆ ಅಕ್ಕಯ್ಯಮ್ಮನ ಅಂಗಡಿಯ ಬಳಿ ಸೇರತೊಡಗಿದರು. ಅಕ್ಕಯ್ಯಮ್ಮ ಮಾಮಾಲಿಯಾಗಿ ನಗುನಗುತ್ತಲೇ ಆಮ್ಲೇಟ್ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದಳು.

## ಕೇಶವರೆಡ್ಡಿ ಹಂದ್ರಾಳ

ಕನ್ನಡ ಓದುಗರಿಗೆ ಕತೆಗಾರ, ಕಾದಂಬರಿಕಾರ ಕೇಶವರೆಡ್ಡಿ ಹಂದ್ರಾಳ ಅವರದು ಪರಿಚಿತ ಹೆಸರು. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ', 'ಸೋನಾಗಾಚಿ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. 'ಮೃಗತೃಷ್ಣ', 'ಲಂಟಾನಾ' ಮತ್ತು 'ಅಣು' ಅವರ ಕಾದಂಬರಿಗಳಾಗಿವೆ.